# ಫ್ಯಾಮಿಲಿ ಆಡಿಯನ್ಸ್ ಹೀರೊ

■ ಸುಮಲತಾ ಎನ್.

## ಹೊಸ ಶೇಡ್‌ನಲ್ಲಿ 'ಬನಾರಸ್' ಹುಡುಗ

'ಬನಾರಸ್' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟಿದ್ದ ನಟ ಝೈದ್ ಖಾನ್ ಇದೀಗ ಎರಡನೇ ಹೆಜ್ಜೆ ಇಡುತ್ತಿದ್ದಾರೆ. ಭಿನ್ನ ಕಥೆಯೊಂದಿಗೆ ಹೊಸತೊಂದು ಶೇಡ್‌ನಲ್ಲಿ ತಮ್ಮನ್ನು ಈ ಸಿನಿಮಾದಲ್ಲಿ ಕಾಣಬಹುದಾಗಿ ಹೇಳುವ ಅವರಿಗೆ, 'ಫ್ಯಾಮಿಲಿ ಆಡಿಯನ್ಸ್ ಹೀರೊ' ಎಂದು ಕರೆಸಿಕೊಳ್ಳುವ ಆಸೆ. ಹೊಸ ಸಿನಿಮಾ ನೆಪದಲ್ಲಿ ಮಾತಿಗೆ ಸಿಕ್ಕ ಅವರು 'ಸುಧಾ'ದೊಂದಿಗೆ ಹಲವು ಸಂಗತಿಗಳನ್ನು ಹಂಚಿಕೊಂಡರು. ಅವರ ಮಾತುಕತೆ ಇಲ್ಲಿದೆ...

**◆ ಎರಡನೇ ಸಿನಿಮಾದಲ್ಲಿ ನಿಮ್ಮನ್ನು ಯಾವ ಧಾಟಿಯಲ್ಲಿ ಕಾಣಬಹುದು?**

ಕನ್ನಡ ಸಿನಿಮಾರಂಗದಲ್ಲಿ ಈ ರೀತಿಯ ಜಾನರ್ ಬಂದೇ ಇಲ್ಲ ಎನ್ನಬಹುದು. ಪಕ್ಕಾ ಯೂಥ್ ಕಥೆ. ಥ್ರಿಲ್ ಅನುಭವ ನೀಡುವಂಥದ್ದು. ಥಿಯೇಟರ್‌ನಲ್ಲಿ ಶಿಳ್ಳೆ, ಚಪ್ಪಾಳೆ ತುಂಬಿಸಬಲ್ಲ ಕಥೆ ಎಂದು ಧೈರ್ಯವಾಗಿ ಹೇಳಬಹುದು. ಪ್ರೇಕ್ಷಕರ ಮನ ತಟ್ಟುವುದು 200 ಪರ್ಸೆಂಟ್ ಗ್ಯಾರಂಟಿ. ಸಿನಿಮಾಗೆ ಬಂದವರಿಗೆ, ಇವನು ನಿಜವಾಗಿಯೂ 'ಬನಾರಸ್' ಸಿನಿಮಾದ ಹೀರೊನಾ ಅಂತ ಅಚ್ಚರಿಯಾಗುವುದು ಖಚಿತ. ಅಂಥ ಶೇಡ್ ನನ್ನ ಪಾತ್ರದ್ದು. ಮೊದಲ ಸಿನಿಮಾದಲ್ಲಿ ಮುದ್ದಾಗಿ ಕಾಣಿಸಿಕೊಂಡಿದ್ದೆ. ಇಲ್ಲಿ ಸಂಪೂರ್ಣ ಬೇರೆ. ಹಾಗೆಂದು ಮಾಸ್ ಅಲ್ಲ, ಆದರೆ ಮಾಸ್ ಟಚ್ ಇದೆ.

**◆ 'ಬನಾರಸ್' ಸಿನಿಮಾ ನಿಮಗೆ ಏನನ್ನು ಕಲಿಸಿತು? ಅದರಿಂದ ನೀವು ಮಾಡಿಕೊಂಡ ಮಾರ್ಪಾಡು ಅಥವಾ ಸುಧಾರಣೆ ಏನು?**

ಸಿನಿಮಾಗೆ ಸಂಬಂಧಿಸಿದಂತೆ ಪ್ರತಿ ವಿಚಾರದಲ್ಲಿಯೂ ಸುಧಾರಣೆ ಮಾಡಿಕೊಂಡಿದ್ದೇನೆ. ನಟನೆಯಲ್ಲಿ ನಾನು ತರಬೇತಿ ಪಡೆದಿದ್ದರಿಂದ ಅದರಲ್ಲಿ ಬದಲಾವಣೆ ವಿಚಾರ ಬರುವುದಿಲ್ಲ. ಆದರೆ ಕಂಟೆಂಟ್, ಸಿನಿಮಾ ಬಿಡುಗಡೆ, ಪ್ರೊಮೋಷನ್, ಥಿಯೇಟರ್, ಸಿನಿಮಾ ಮೇಕಿಂಗ್ – ಹೀಗೆ ಪ್ರತಿಯೊಂದು ಅಂಶ ಗೊತ್ತಾಗಿದೆ. ನಾನು ಏನು ತಪ್ಪುಗಳನ್ನು ಮಾಡಿದ್ದೀನಿ ಎಂಬುದನ್ನು ತಿಳಿದುಕೊಂಡು ಈ ಸಿನಿಮಾದಲ್ಲಿ ಅದು ನಡೆಯಬಾರದೆಂದು ಎಚ್ಚರಿಕೆ ವಹಿಸಿದ್ದೇನೆ. ನಮಗೆ ಏನು ಬೇಕೋ ಅದನ್ನು ಸಿನಿಮಾ ಮಾಡಿದರೆ ಪ್ರೇಕ್ಷಕರು ನೋಡಲ್ಲ, ಪ್ರೇಕ್ಷಕರಿಗೆ ಏನು ಬೇಕೋ ಅದನ್ನು ಸರಿಯಾದ ರೀತಿ ಕೊಟ್ಟರೆ ಮಾತ್ರ ನೋಡುತ್ತಾರೆ. ಇದನ್ನು ಚೆನ್ನಾಗಿ ಅರಿತಿದ್ದೇನೆ. ಇದೇ ಪ್ರಜ್ಞೆಯಿಂದ ಸಿನಿಮಾಗಳನ್ನು ಆರಿಸಿಕೊಳ್ಳುತ್ತೇನೆ.

**◆ ಸಿನಿಮಾ ಕಥೆ ಆಯ್ಕೆಯಲ್ಲಿ ನಿಮ್ಮ ಮಾನದಂಡ ಏನಾಗಿರುತ್ತದೆ?**

ಮೊದಲನೆಯದಾಗಿ, ಯಾರಾದರೂ ಬಂದು ಕಥೆ ಹೇಳಿದರೆ, ಅಲ್ಲಿ 'ವಾವ್ ಫ್ಯಾಕ್ಟರ್' ನನಗೆ ಕಾಣಬೇಕು. ಇದು ಸಖತ್ ಆಗಿದೆ, ಯಾರೂ ಮಾಡಿಲ್ಲವಲ್ಲ ಎಂದು ತಕ್ಷಣವೇ ಅನ್ನಿಸಬೇಕು. ಎರಡನೆಯದು, ನನ್ನ ಸಿನಿಮಾವನ್ನು ಪ್ರೇಕ್ಷಕರು ಏಕೆ ನೋಡಬೇಕು? ನನ್ನ ಸಿನಿಮಾಗೆ ದುಡ್ಡು, ಸಮಯ ಕೊಟ್ಟು ಬಂದ ಪ್ರೇಕ್ಷಕನಿಗೆ ನಾನೇನು ನೀಡಬಹುದು? ಎಂಬುದನ್ನು ನೋಡುತ್ತೇನೆ. ಇದಕ್ಕೆ ನನಗೆ ಉತ್ತರ ಸಿಕ್ಕರೆ ಮಾಡುತ್ತೇನೆ. ನಾನು ಬೇರೆ ಹೀರೊಗಳ ರೀತಿ ಇರಬಾರದು, ನನ್ನದೇ ದಾರಿ ಮಾಡಿಕೊಳ್ಳಬೇಕು ಎಂಬುದೇ ನನ್ನ ಉದ್ದೇಶ. ಬೇರೆಯವರನ್ನು ಅನುಕರಿಸುತ್ತಿದ್ದರೆ, ಜೀವನವಿಡೀ ಅದನ್ನೇ ಮಾಡಿಕೊಂಡಿರುತ್ತೇನೆ. ಹಾಗಾಗಿ ಆ ದಾರಿ ನನ್ನದಲ್ಲ.

**◆ ನಿಮ್ಮನ್ನು ನೀವು ಯಾವ ಪಾತ್ರದಲ್ಲಿ ಕಾಣುವ ಆಸೆ ಇದೆ?**

ಈ ಮುಂಚೆ, ನನಗೆ ಈ ರೀತಿ ಕಥೆ ಬೇಕು, ನನ್ನ ಪಾತ್ರ ಹೀಗಿರಬೇಕು, ನಾನು ಹೀಗೆ ಕಾಣಿಸಿಕೊಳ್ಳಬೇಕು ಎಂದೆಲ್ಲ ಯೋಚಿಸುತ್ತಿದ್ದೆ. ಅದನ್ನೇ ನಿರ್ದೇಶಕರಿಗೂ ಹೇಳುತ್ತಿದ್ದೆ. ವಾಸ್ತವದಲ್ಲಿ ಇವೆಲ್ಲ ಸಿನಿಮಾರಂಗದಲ್ಲಿ ನಡೆಯುವುದಿಲ್ಲ. ಈಗ ಯಾರೇ ನಿರ್ದೇಶಕರು ನನ್ನ ಹತ್ತಿರ ಬಂದು ಯಾವ ಥರ ಕಥೆಯಿರಬೇಕು ಅಂತ ಕೇಳಿದರೆ, ನಾನು

